ಪ್ರಬಂಧ

# ಎನ್ನ ಕಾಯವ ದಂಡಿಸಿ ನಿನ್ನ ಕಾಡುವೆನಯ್ಯಾ



**ವಸುಧೇಂದ್ರ**

ಕಲೆ: ರೂಪಶ್ರೀ ಕಲ್ಲಿಗನೂರು

ಕನ್ನಡದಲ್ಲಿ ಆಧುನಿಕ ಪ್ರಜ್ಞೆಯ ವಿಭಿನ್ನ ಕತೆಗಳನ್ನು ಬರೆದ ದಿವಂಗತ ಶಾಂತಿನಾಥ ದೇಸಾಯಿ ಅವರ 'ಗಂಡ ಸತ್ತ ಮೇಲೆ' ಎನ್ನುವ ಕಥೆ ನನ್ನನ್ನು ಯಾವತ್ತೂ ಕಾಡುತ್ತದೆ. ಅವರ ಮಹತ್ವದ 'ಕ್ಷಿತಿಜ' ಕಥಾಸಂಕಲನದಲ್ಲಿ ಈ ಕಥೆಯಿದೆ. ಅದರ ಸಂಕ್ಷಿಪ್ತ ರೂಪ ಹೀಗಿದೆ.

ಮಹಾರಾಷ್ಟ್ರದ ಯಾವುದೋ ಜಿಲ್ಲಾ ಕೇಂದ್ರದಲ್ಲಿ ಈ ಕಥೆ ನಡೆಯುತ್ತದೆ. ಗಂಡ-ಹೆಂಡತಿ ಮತ್ತು ಅವರಿಗೊಬ್ಬಳು ಮಗಳು ಅಲ್ಲಿ ನೆಲೆಸಿರುತ್ತಾರೆ. ಗಂಡ ಚಿಕ್ಕ ವಯಸ್ಸಿನಲ್ಲಿಯೇ ಮರಣ ಹೊಂದುತ್ತಾನೆ. ಮಗಳಿನ್ನೂ ಹತ್ತನೇ ತರಗತಿ. ತಾಯಿ ಆರಂಭದಲ್ಲಿ ವೈಧವ್ಯದ ನೋವನ್ನು ಅನುಭವಿಸಿದರೂ ಒಂದಾರು ತಿಂಗಳಲ್ಲಿ ಬದುಕಿಗೆ ಹೊಂದಿಕೊಳ್ಳುತ್ತಾಳೆ. ಜೀವವಿಮೆಯಿಂದಾಗಿ ಹಣದ ಸಮಸ್ಯೆಯೇನೂ ಇರುವುದಿಲ್ಲ. ನಿಧಾನವಾಗಿ ಆಕೆ ಸಂಸಾರದ ಚುಕ್ಕಾಣಿ ಹಿಡಿಯುತ್ತಾಳೆ. ಈಗ ಅಧಿಕಾರದ ದರ್ಪ ಅವಳಲ್ಲಿ ಜಾಗೃತವಾಗುತ್ತದೆ. ತನ್ನ ಮಗಳು ತನ್ನ ಇಚ್ಛೆಯಂತೆಯೇ ನಡೆದುಕೊಳ್ಳಬೇಕು ಎಂದು ಆಶಿಸುತ್ತಾಳೆ. ಅವಳಿಗೆ ಹತ್ತನೇ ತರಗತಿಯಲ್ಲಿ ಗಣಿತದ ವಿಷಯ ಕಷ್ಟವೆಂದು ತಿಳಿದು ಗಣಿತದ ಮಾಸ್ತರರೊಬ್ಬರನ್ನು ಮನೆ ಓದಿಗೆ ನಿಗದಿ ಮಾಡುತ್ತಾಳೆ. ಹರೆಯದ ಈ ಚಂದದ ಮಾಸ್ತರ ಮತ್ತು ಮಗಳಿಗೆ ಪ್ರೇಮಾಂಕುರವಾಗುತ್ತದೆ. ಅತ್ಯಂತ ವಿಧೇಯತೆಯಿಂದ ಮಗಳು ಈ ಮದುವೆಗೆ ಒಪ್ಪಿಗೆ ಕೊಡು ಎಂದು ತಾಯಿಯನ್ನು ಬೇಡಿಕೊಳ್ಳುತ್ತಾಳೆ. ತಾಯಿ ಚಂಡಿಯಾಗುತ್ತಾಳೆ. ತನ್ನ ಮಗಳನ್ನು ದೊಡ್ಡ ಐಎಎಸ್ ಆಫೀಸರಿಗೆ ಮದುವೆ ಮಾಡಿಕೊಡುವೆನೇ ಹೊರತು ಇಂತಹ ಜುಜುಬಿ ಮಾಸ್ತರನಿಗಲ್ಲ ಎಂದು ಆರ್ಭಟ ಮಾಡಿ ಆ ಕೋರಿಕೆಯನ್ನು ನಿರ್ಲಕ್ಷ್ಯ ಮಾಡಿ, ಆ ಮಾಸ್ತರನನ್ನು ಮಗಳ ಬದುಕಿಂದ ದೂರ ಮಾಡುತ್ತಾಳೆ. ತನ್ನ ಪ್ರೇಮ ವಿಫಲವಾದ ನೋವಿನಲ್ಲಿ ಮಗಳು ಮುಂದಿನ ಕಾಲೇಜಿನ ವಿದ್ಯಾಭ್ಯಾಸದಲ್ಲಿ ಯಶಸ್ಸು ಕಾಣುವುದಿಲ್ಲ. ಅದರಿಂದಾಗಿ ತಾಯಿಯ ಅಸಹನೆ ಹೆಚ್ಚುತ್ತದೆ. ಈ ಹೊತ್ತಿನಲ್ಲಿ ಮಗಳಿಗೆ ಸಂಗೀತ ಕಲಿಸಬೇಕು ಎಂದು ತಾಯಿ ಅವಳ ಇಚ್ಛೆಗೆ ವಿರುದ್ಧವಾಗಿ ಬಲವಂತದ ಪ್ರಯತ್ನ ಮಾಡುತ್ತಾಳೆ. ಅದೂ ವಿಫಲವಾಗುತ್ತದೆ. ಇಂತಹ ವಿಷಮ ಸಮಯದಲ್ಲಿ ಅನಿರೀಕ್ಷಿತವಾಗಿ ಮಗಳು ಅನಾರೋಗ್ಯಕ್ಕೆ ಒಳಗಾಗುತ್ತಾಳೆ. ಆಕೆಯನ್ನು ಪರೀಕ್ಷಿಸಿದ ವೈದ್ಯರು ಕ್ಷಯ ರೋಗ ಬಂದಿರುವುದಾಗಿಯೂ, ಹೆಚ್ಚು ದಿನ ಬದುಕುವುದಿಲ್ಲವೆಂದೂ ಹೇಳುತ್ತಾರೆ. ತಾಯಿ ಆಘಾತಕ್ಕೆ ಒಳಗಾಗಿ ಕಣ್ಣೀರು ಹಾಕುತ್ತಾಳೆ. ಆದರೆ, ತನ್ನನ್ನು ಕಾಡಿದ ತಾಯಿ ಈಗ ಕಣ್ಣೀರು ಹಾಕುವುದನ್ನು